ಈಗ ಸದನವನ್ನು ನಾಳೆ ಬೆಳಿಗ್ಗೆ **10.30** ರವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ **5.25**ಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ **6**ನೇ ಆಗಸ್ಟ್ **2003** ರಂದು ಬೆಳಿಗ್ಗೆ **10.30**ಕ್ಕೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು.)

(+ ಈ ಚುಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

10. ಅನುಬಂಧ

ಸೂಳ್ಯ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಹುಡ್ಕೊ ನೆರವಿನ ಯೋಜನೆ

4373 (5275) : ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಹುಡ್ಕೋ ನೆರವಿನ ಸ್ಥಳೀಯ ಸಂಸ್ಥೆಗಳ ಮೂಲ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆಯೇ;

ಆ) ಸದರಿ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು; ಎಷ್ಟು ಸಮಯದಲ್ಲಿ ಪೂರ್ತಿಗೊಳಿಸಲಾಗುವುದು; (ವಿವರ ನೀಡುವುದು);

ಇ) ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ಎಷ್ಟು ಹಣವನ್ನು ಪಾವತಿಸಲಾಗಿದೆ;

ಈ) ಯೋಜನೆಯಡಿ ಪ್ರಾರಂಭಗೊಂಡ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳು ಅರ್ಧದಲ್ಲೇ ನಿಂತಿದೆ; ಇದಕ್ಕೆ ಕಾರಣಗಳೇನು?

ಶ್ರೀ ಕುಮಾರ್ ಎಸ್. ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಹೌದು.

ಆ) ಅಂದಾಜು ಮೊತ್ತ 25.00 ಲಕ್ಷ ರೂ. ಗಳಾಗಿದ್ದು, ಟೆಂಡರ್ ಪ್ರೀಮಿಯಂ ಸೇರಿ ರೂ.32.5 ಲಕ್ಷಗಳಾಗುತ್ತವೆ.

ದಿನಾಂಕ: 19.4.2002 ರೊಳಗೆ ಪೂರ್ಣಗೊಳಿಸಬೇಕಾಗಿತ್ತು ಆದರೆ ಸ್ಥಳೀಯ ಸಂಸ್ಥೆಗಳು ತಯಾರಿಸಿದ ಅಂದಾಜಿನ ಪ್ರಮಾಣಗಳು ವಾಸ್ತವಿಕವಾಗಿ ಪರಿಗಣಿಸದಿದ್ದು, ಹಾಗೂ ದರಗಳಲ್ಲಿ ವ್ಯತ್ಯಾಸ ಇರುವ ಕಾರಣ ನಿಗದಿತ ರೂ. 32.50 ಲಕ್ಷಗಳು ಮೀರುತ್ತಿದ್ದು, ಡಾಂಬರೀಕರಣ ಹೊರತುಪಡಿಸಿ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಇ) ರೂ. 26.20 ಲಕ್ಷಗಳನ್ನು ಪಾವತಿಸಲಾಗಿದೆ.

ಈ) ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಸ್ಥಳೀಯ ಸಂಸ್ಥೆಗಳು ತಯಾರಿಸಿ ಅಂದಾಜಿನ ಪ್ರಮಾಣಗಳು ವಾಸ್ತವೀಕವಾಗಿ ಪರಿಗಣಿಸದಿದ್ದು, ಹಾಗೂ ದರಗಳಲ್ಲಿ ವ್ಯತ್ಯಾಸ ಇರುವ ಕಾರಣ ನಿಗದಿತ ರೂ. 32.50 ಲಕ್ಷಗಳು ಮೀರುತ್ತಿರುವುದರಿಂದ ಡಾಂಬರೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿಲ್ಲ.

ಬೆಳ್ತಂಗಡಿ ತಾಲ್ಲೂಕಿನ ಶಿವಾಜಿ ಗ್ರಾಮಕ್ಕೆ ವಿದ್ಯುತ್ ಸಂಪರ್ಕ ಒದಗಿಸುವ ಬಗ್ಗೆ

4374 (5276) : ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಶಿವಾಜಿ ಗ್ರಾಮ ಬಂಗೇರಡ್ಡ ಪರಿಶಿಷ್ಟ ಜಾತಿ ಕಾಲೋನಿಗೆ ಯಾವ ಯೋಜನೆಯಡಿ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ?

ಆ) ಒದಗಿಸಿದ್ದರೆ, ಯಾವಾಗ ಒದಗಿಸಲಾಗಿದೆ? ಇದರ ಅಂದಾಜು ವೆಚ್ಚ ಎಷ್ಟು? (ವಿವರಗಳನ್ನು ನೀಡುವುದು)

ಇ) ಸದರಿ ಯೋಜನೆಯಡಿ ಎಷ್ಟು ಜನ ಪರಿಶಿಷ್ಟ ಜಾತಿ: ಜನಾಂಗ ದವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ? (ಫಲಾನುಭವಿಗಳ ಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ವಿದ್ಯುತ್ ಸಂಪರ್ಕ ಇನ್ನೂ ಒದಗಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬೆಳ್ತಂಗಡಿ ತಾಲ್ಲೂಕಿನ ಶಿವಾಜಿ ಗ್ರಾಮದ ಬಂಗೇರಡ್ಕ ಪರಿಶಿಷ್ಟ ಜಾತಿ ಕಾಲೋನಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕಂಪೆನಿಯ ನಿಧಿ ಯೋಜನೆಯಡಿಯಲ್ಲಿ ರೂ. 4.13 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಕಾರ್ಯಾದೇಶ ನೀಡಲಾಗಿದ್ದು, ಸದ್ಯಸಲ್ಲೇ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ.

ಈ ಯೋಜನೆಯ ಅಡಿಯಲ್ಲಿ ಸುಮಾರು 16 ಪರಿಶಿಷ್ಟ ಜನಾಂಗದ ಫಲಾನುಭವಿಗಳಿದ್ದು, ಇವರುಗಳ ವಿವರಗಳನ್ನು ಈ ಕೆಳಕಂಡಂತೆ ನೀಡಿದೆ.

ಕ್ರ. ಸಂ.	ಫಲಾನುಭವಿಯ ಹೆಸರು	ತಂದೆಯ ಹೆಸರು
1	ಅಣ್ಣು	ಚಂರ್ಬ
2	ಸೀನಪ್ಪ	ಚಂರ್ಬ
3	ಚಂದ್ರ	ಕರಿಯ
4	ಮಂಚ	ಬೋರ
5	ಪುತ್ರ	ಅಂಗಾರ ಮುಗೇರ
6	ಚೀಂಕ್ರ	ಅಂಗಾರ ಮುಗೇರ
7	ಮೊಡಿಯ	ಮಂಚ
8	ತನಿಯ	ಮಂಚ ಮುಗೇರ
9	ಶಂಕರ	ಮಂಚ ಮುಗೇರ
10	ಮಾದ	ಮಂಚ ಮುಗೇರ
11	ಕೊರಗು	ಮೊಡಂಕಲಿ
12	ಕುಂಜ್ಞ	ಚಂರ್ಬ
13	ಚಂದ್ರಹಾಸ	ಅಂಗಾರ ಮುಗೇರ
14	ಮೊನಪ್ಪ	ಅಂಗಾರ
15	ಬಾಗು	ಬೋರ
16	ಪಕೀರ	ಕೇಪು